ರಿ.ನಂ. ಆರ್.ಸಿ.ಎಸ್.1540 ಸ್ಥಾಪನೆ : 08-11-1939 PAN : AAAJM0788P GSTIN : 29AAAJM0788P1ZD

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ - 577 204 (ಕರ್ನಾಟಕ)

The Malnad Areca Marketing Co-Operative Society Ltd.,

A.P.M.C. Yard, Sagara Road, Shivamogga - 577 204 (Karnataka)

08182-250513/14, 250881 ho@mamcos.info www.mamcos.info

ಮಾಮ್‌ಕೋಸ್/ಕೇ.ಕ/ಅಂಕಿಅಂಶ/55/2026-27/496 ದಿನಾಂಕ: 30.06.2026

ಸಂಘದ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮುದ್ರಣದ ಟೆಂಡರ್ ಪ್ರಕಟಣೆ

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಎಪಿಎಂಸಿ ಆವರಣ, ಸಾಗರ ರಸ್ತೆ, ಶಿವಮೊಗ್ಗ ಇದರ 2025-26 ನೇ ಸಾಲಿನ **ವಾರ್ಷಿಕ ವರದಿಯ 32,300 ಪುಸ್ತಕಗಳನ್ನು** (ಅಂದಾಜು **60 ಪುಟಗಳು + ಅಥವಾ – 15 ಪುಟಗಳು**) ಎ ಗ್ರೇಡ್ ಮಿಲ್‌ನ 58 ಜಿ.ಎಸ್.ಎಂ ಕ್ರಿಮ್ ವೋವ್ ಗುಣಲಕ್ಷಣದ ಪೇಪರ್‌ನಲ್ಲಿ ಮುದ್ರಿಸಬೇಕಿದ್ದು,1/4 ಡೆಮಿ ಸೈಜ್ 90 ಜಿ.ಎಸ್.ಎಂ ಪೇಪರಿನ ರಕ್ಕಾ ಪುಟವು ಸೇರಿ) ಮತ್ತು **ಲೆಕ್ಕಪರಿಶೋಧನಾ ವರದಿಯ 4000 ಪುಸ್ತಕಗಳನ್ನು** (ಅಂದಾಜು **150 ಪುಟಗಳು + ಅಥವಾ – 15 ಪುಟಗಳು**) , ಎ ಗ್ರೇಡ್ ಮಿಲ್ ನ 58 ಜಿ.ಎಸ್.ಎಂ ಕ್ರಿಮ್ ವೋವ್ ಗುಣಲಕ್ಷಣದ ಪೇಪರ್‌ನಲ್ಲಿ ಮುದ್ರಿಸಬೇಕಿದ್ದು, 1/4 ಡೆಮಿ ಸೈಜ್ 90 ಜಿ.ಎಸ್.ಎಂ. ಪೇಪರಿನ ರಕ್ಕಾ ಪುಟವೂ ಸೇರಿ) ಮುದ್ರಿಸಲು ಟೆಂಡರ್‌ನ್ನು ಕರೆಯಲಾಗಿದೆ. ಈ ಪ್ರಕ್ರಿಯೆ **ಟೆಂಡರ್ ಹಾಗೂ ನೆಗೋಷಿಯೇಷನ್** ನ್ನು ಒಳಗೊಂಡಿದೆ.

ದರವನ್ನು ನಮೂದಿಸುವಾಗ ಒಂದು ಪುಟದ ಮುದ್ರಣಕ್ಕೆ (ದರವು ರಕ್ಕಾ ಪುಟದ ದರವನ್ನು ಒಳಗೊಂಡಿರಬೇಕು) ದರವನ್ನು ನಮೂದಿಸುವುದು ಹಾಗೂ **ಮೂಲ ಬೆಲೆ (ಸಾಗಾಣಿಕ ವೆಚ್ಚ ಹಾಗೂ ಇತರೆ ವೆಚ್ಚಗಳು ಸೇರಿ)+ ಜಿಎಸ್‌ಟಿ** ಹೀಗೆ ಪ್ರತ್ಯೇಕವಾಗಿ ದರವನ್ನು ನಮೂದಿಸುವುದು. ಜಿ.ಎಸ್.ಟಿ ಅನ್ವಯವಾಗದಿದ್ದಲ್ಲಿ ಅದರ ಬಗೆಗೆ ಕೂಡ ನಮೂದಿಸುವುದು.

ಟೆಂಡರ್‌ನೊಂದಿಗೆ ರೂ. 35,000-00 ಡಿಡಿಯನ್ನು ಮಾಮ್‌ಕೋಸ್ ನಿ., ಶಿವಮೊಗ್ಗ ಹೆಸರಿನಲ್ಲಿ ಪಡೆದು ಲಗತ್ತಿಸಿರಬೇಕು. ಲಕೋಟೆಯ ಮೇಲೆ " **ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ" ಮುದ್ರಣಕ್ಕೆ ಟೆಂಡರು** ಎಂದು ನಮೂದಿಸಿರಬೇಕು. ಟೆಂಡರ್‌ನೊಂದಿಗೆ ಮೇಲೆ ತಿಳಿಸಿರುವ ಮಾದರಿಯ ಪೇಪರ್‌ನ ಸ್ಯಾಂಪಲ್‌ನ್ನು ಲಗತ್ತಿಸಿರಬೇಕು. **ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ:09.07.2026 ಸಂಜೆ 5.00 ಗಂಟೆ** ನಂತರ ಬರುವ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕೇಂದ್ರಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಅತಿಮುಖ್ಯ ಸೂಚನೆಗಳು:

1. **ಯಾವುದೇ ಕಾರಣವನ್ನು ನೀಡದೆ, ಯಾವುದೇ ಸಮಯದಲ್ಲಿ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ಮಾಮ್‌ಕೋಸ್ ನಿ., ಇದರ ಆಡಳಿತ ಮಂಡಳಿಗೆ ಇರುತ್ತದೆ.**

2. **ಮಾದರಿಯ ಕರಡು ಪ್ರತಿಯಲ್ಲಿ ತಿದ್ದುಪಡಿ ಮಾಡಿಕೊಟ್ಟ ಅಂಶವನ್ನು ಸರಿಯಾಗಿ ತಿದ್ದುಪಡಿ ಮಾಡದೇ ತಪ್ಪಾಗಿ ಅಂತಿಮ ಮುದ್ರಣ ಮಾಡಿದ್ದಲ್ಲಿ ಸಂಬಂಧಿಸಿದ ಮುದ್ರಣಾಲಯದವರ ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಹಣ ಪಾವತಿಯನ್ನು ತಡೆಹಿಡಿಯಲಾಗುವುದು.**

ವ್ಯವಸ್ಥಾಪಕ ನಿರ್ದೇಶಕರು
ಮಲೆನಾಡು ಅಡಿಕೆ ಮಾರಾಟದ
ಸಹಕಾರ ಸಂಘ ನಿಯಮಿತ, ಶಿವಮೊಗ್ಗ.